ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಾಸರಹಳ್ಳಿ ವಲಯ, ಬೆಂಗಳೂರು

ವರದಿ:

ವಿಷಯ : Construction of drain from Appayanna Layout to Depot Muniswamappa Layout and Surrounding area in Ward N 12, Shettyhalli Sub Division.ನ ಕಾಮಗಾರಿ ಅಂದಾಜನ್ನು ಅನುಮೋದನೆಗೆ ಸಲ್ಲಿಸುವ ಬಗ್ಗೆ.

ಕಾಮಗಾರಿ ಸಂಕೇತ : **012-18-000009**

* * * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ವಲಯದ, ಶೆಟ್ಟಿಹಳ್ಳಿ ಉಪವಿಭಾಗದ ವಾರ್ಡ್ ನಂ. 12ರ ಶೆಟ್ಟಿಹಳ್ಳಿ ವ್ಯಾಪ್ತಿಯಲ್ಲಿನ ಕಮ್ಮಗೊಂಡನಹಳ್ಳಿ ಅಪ್ಪಯ್ಯಣ್ಣ ಬಡಾವಣೆಯಿಂದ ಡಿಪೋ ಮುನಿಸ್ವಾಮಪ್ಪ ಬಡಾವಣೆಗೆ ಹಾಗೂ ಸುತ್ತ ಮುತ್ತಲಿನ ಪ್ರದೇಶದಲ್ಲಿ ಚರಂಡಿ ನಿರ್ಮಾಣ ಕಾಮಗಾರಿಯು ಬಿ.ಬಿ.ಎಂ.ಪಿ ಆಯವ್ಯದ **2017-18ನೇ ಸಾಲಿನ ವಿಶೇಷ ಅನುದಾನ ಲೆಕ್ಕ ಶಿರ್ಷಿಕೆ ಪಿ-3332** ರ ಅನುದಾನದಡಿ **ರೂ. 35.00 ಲಕ್ಷಗಳಿಗೆ** ಕಾಮಗಾರಿ ಮಂಜುರಾಗಿರುತ್ತದೆ ಹಾಗೂ ಸದರಿ ಕಾಮಗಾರಿಗೆ **012-18-000009** ರಲ್ಲಿ ಜಾಬ್ ಸಂಖ್ಯೆ ದೊರಕಿರುತ್ತದೆ.

ವಾರ್ಡ್ ನಂ 12 ರಲ್ಲಿ ಬರುವ ಕಮ್ಮಗೊಂಡನಹಳ್ಳಿ ಕಮ್ಮಗೊಂಡನಹಳ್ಳಿ ಅಪ್ಪಯ್ಯಣ್ಣ ಬಡಾವಣೆಯಿಂದ ಡಿಪೋ ಮುನಿಸ್ವಾಮಪ್ಪ ಬಡಾವಣೆಗೆ ಸರ್ಮಪಕವಾದ ರಸ್ತೆ ಬದಿ ಚರಂಡಿಯಿಲ್ಲದೆ ನಿತ್ಯ ಬಳಕೆಯ ನೀರು ಮತ್ತು ಮಳೆ ನೀರು ರಸ್ತೆಯ ಮೇಲೆ ಹರಿಯುತ್ತಿದ್ದು, ಸಾರ್ವಜನಿಕರು ಹಾಗೂ ವಾಹನಗಳು ಸಂಚರಿಸಲು ಆಗದಂತಹ ಸ್ಥತಿಯಲ್ಲಿರುತ್ತದೆ. ಆದ್ದರಿಂದ ಸದರಿ ರಸ್ತೆಯಲ್ಲಿ ಚರಂಡಿ ನಿರ್ಮಿಸಿ ಅಭಿವೃದ್ಧಿ ಪಡಿಸುವುದು ಹಾಗೂ 5 ನೇ ಅಡ್ಡ ರಸ್ತೆಯಲ್ಲಿ ಚರಂಡಿ ನಿರ್ಮಿಸುವುದು ಹಾಗೂ ಕಾಂಕ್ರೀಟ್ ರಸ್ತೆ ನಿರ್ಮಿಸಲು ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಕೋರಿರುವುದರ ಮೇರೆಗೆ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು ಅಂದಾಜನ್ನು ತಯಾರಿಸಿ ಸಲ್ಲಿಸಲಾಗಿದೆ.

1. ರಸ್ತೆಬದಿ ಚರಂಡಿ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಿಸಲು ಮಣ್ಣು ಅಗೆತದ ಕೆಲಸ ಮಾಡುವುದು.
2. 1:4:8 ನಿಂದ ಚರಂಡಿ ಹಾಗೂ ರಸ್ತೆಗಾಗಿ ಬೆಡ್ ಹಾಕುವುದು.
3. ಎಂ 20 ಸಿಮೆಂಟ್ ಕಾಂಕ್ರೀಟ್ ನಿಂದ ಚರಂಡಿ ಹಾಗೂ ಕಾಂಕ್ರೀಟ್ ರಸ್ತೆ ನಿರ್ಮಿಸುವುದು.
4. ಟಿ.ಎಂ.ಟಿ ಸ್ಟೀಲ್ ಎಫ್ಇ-500 ಆರ.ಸಿ.ಸಿ ಚರಂಡಿಗಾಗಿ ಒದಗಿಸಿ ಜೋಡಿಸುವುದು.
5. ಚರಂಡಿಗಳಿಗಾಗಿ ಅವಶ್ಯಕ ಸೆಂಟ್ರೀಂಗ್ ಒದಗಿಸುವುದು ಹಾಗೂ ತೆಗೆಯುವುದು.
6. ಪ್ರೀಕ್ಯಾಸ್ಟ್ ಕಾಂಕ್ರೀಟ್ ನಿಂದ ಚರಂಡಿಗೆ ಕವರಿಂಗ್ ಸ್ಲಬ್ ಅಳವಡಿಸುವುದು ಇತ್ಯಾದಿ.

ಅಂದಾಜನ್ನು 2016-17ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ ದರಪಟ್ಟಿಯನ್ನು ಅಳವಡಿಸಿಕೊಂಡು ರೂ. 35.00 ಲಕ್ಷಗಳಿಗೆ ತಯಾರಿಸಿದ್ದು, ಸದರಿ ಕಾಮಗಾರಿಗೆ **2017-18ನೇ ಸಾಲಿನ ವಿಶೇಷ ಅಭಿವೃದ್ಧಿ ಕಾಮಗಾರಿಗಳ ಲೆಕ್ಕ ಶಿರ್ಷಿಕೆ ಪಿ-3332ರ** ಅನುದಾನದಲ್ಲಿ ರೂ 35.00 ಲಕ್ಷಗಳಿಗೆ ಅನುಮೋದಿಸಿ, ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಕೋರಿ ಅಂದಾಜುಪಟ್ಟಿಯನ್ನು ಸಲ್ಲಿಸಿದೆ.

ಸಹಾಯಕ ಅಭಿಯಂತರರು
ವಾರ್ಡ್ ನಂ. 12

ಸಹಾಯಕ ಕಾರ್ಯಪಾಲಕ ಅಭಿಯಂತರರು
ಶೆಟ್ಟಿಹಳ್ಳಿ ಉಪವಿಭಾಗ, ಬಿ.ಬಿ.ಎಂ.ಪಿ
ಬೆಂಗಳೂರು.

Scanned by CamScanner